ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:1813/2024
ಸಿ.ಡಬ್ಲ್ಯು 1 ಪಿ.ಡಬ್ಲೂ : 1

| | |
|---|---|
| ಸಾಕ್ಷಿದಾರರ ಹೆಸರು | ಚೇತನ್ ಸಾಲಿಯಾನ್ |
| ತಂದೆಯ ಹೆಸರು | ಮೋಹನ್ ಪುತ್ರನ್ |
| ವಯಸ್ಸು | 38 ವರ್ಷ |
| ಉದ್ಯೋಗ | ಸ್ವಂತ ವ್ಯಾಪಾರ |
| ವಾಸಸ್ಥಳ | ಹೆಜಮಾಡಿ |

ದಿನಾಂಕಃ 09-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ಇದೆ. ಸುಮಾರು 1 ವರುಷದ ಹಿಂದೆ ಒಂದು ದಿನ ಮದ್ಯಾಹ್ನ 1 ಗಂಟೆಯ ಸಮಂಕ್ಕೆ ಹೆಜಮಾಡಿ ಬೀಚ್ ನಲ್ಲಿರುವಾಗ 1 ನೇ ಆರೋಪಿಯವರಿಗೂ ಮತ್ತು ನನಗೂ ಮಾತಿಗೆ ಮಾತು ನಡೆಯಿತು. 2 ನೇ ಆರೋಪಿಯವರು ಅಲ್ಲಿಗೆ ಬಂದರು ನನ್ನ ತಂದೆಯವರೊಂದಿಗೆ ಏನು ಮಾತನಾಡುತ್ತೀಯ ಎಂದು ನನ್ನನ್ನು ಹಿಂಬದಿಯಿಂದ ಎಳೆದರು. 1 ನೇ ಆರೋಪಿಯವರು ಕೋಲಿನಿಂದ ನನ್ನ ತಲೆಗೆ ಹೊಡೆದರು. ನಿನ್ನ ಬಳಿ ಏನು ಮಾಡಲು ಆಗುತ್ತದೆ ಮಾಡು ಎಂದು ಹೇಳಿದರು. ನಂತರ ನಾನು ಪಡುಬಿದ್ರಿ ಪೊಲೀಸ್ ಠಾಣೆ ಗೆ ದೂರು ನೀಡಿದೆನು.

ನಂತರ ನಾನು ಪಡುಬಿದ್ರಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದೆನು. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಇದು ನಾನು ನೀಡಿದ ದೂರು ಎಂದುಕ ಗುರುತಿಸಿದ್ದು ಅದನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿರುವ ಸಹಿಯನ್ನು ಸಾಕ್ಷಿಯವರು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎ ಎಂದು ಗುರುತಿಸಲಾಯಿತು.

ಸಾಕ್ಷಿಯವರು 2 ಭಾವಚಿತ್ರಗಳನ್ನು ನೋಡಿ ಅದರಲ್ಲಿ ತಾನು ಇರುತ್ತೇನೆಂದು ಗುರುತಿಸಿದ್ದು ಸದ್ರಿ ಭಾವಚಿತ್ರಗಳನ್ನು ನಿಪಿ 2 ವತ್ತು 3 ಎಂದು ಗುರುತಿಸಲಾಂತು. ನಿಪಿ 2 ಮತ್ತು 3 ನ್ನು ಪಂಚನಾಮೆ ಮಾಡುವಾಗ ತೆಗೆಯಲಾಯತು. ಘಟನೆಯಾದ ಮರುದಿನ ಪಂಚನಾಮೆಯನ್ನು ಮಾಡಲಾಯಿತು. ಸಾಕ್ಷಿಯವರು ಒಂದು ದಾಖಲೆಯನ್ನು ನೋಡಿ ಆ ದಿನ ಪಂಚನಾಮೆಯನ್ನು ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು. ನಿಪಿ 4 ರಲ್ಲಿ ಸಹಿಯನ್ನು ಸಾಕ್ಷಿಯವರವರು ಗುರುತಿಸಿದ್ದು ಅದನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ನಿಪಿ 4 ರ ಮೂಲಕ ವಶ ಪಡಿಸಿಕೊಂಡ ಕೋಲನ್ನು ಗುರುತಿಸುತ್ತೇನೆ. ಸಾಕ್ಷಿಯವರು ನ್ಯಾಯಾಲಯದ ಮುಂದಿರುವ ಒಂದು ಕೋಲನ್ನು ನೋಡಿ ಇದೇ ಕೋಲು ಎಂದು ಗುರುತಿಸಿದ್ದು ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಮೇಡಮ್ ಸಿ ಎಸ್ ಎಫ್ ವಕೀಲರಿಂದಃ

ಈ ಘಟನೆಯ ವಿಚಾರವಾಗಿ ನೀವು ಎಷ್ಟು ಬಾರಿ ಪೊಲೀಸ್ ಠಾಣೆಗೆ ಹೋಗಿರುತ್ತೀರಿ ಎಂದರೆ 2 ಬಾರಿ ಹೋಗಿರುತ್ತೇನೆ. ನೀವು ನೋಡಿದ ಎಲ್ಲಾ ಸಹಿಗಳನ್ನು ಠಾಣೆಯಲ್ಲೇ ಮಾಡಿರುವುದು ಎಂದರೆ ಸರಿ. ನೀವು ಸಹಿ ಮಾಡಿರುವ ದಾಖಲೆಗಳನ್ನು ನೀವು ಓದಿ ನೋಡಿರುವುದಿಲ್ಲ ಅವುಗಳಲ್ಲಿ ಏನು ಬರೆದಿದೆ ಎಂದು ನಿಮಗೆ ತಿಳಿದಿಲ್ಲ ಎಂದರೆ ಓದಿ ನೋಡಿರುತ್ತೇನೆ. ನಿಪಿ 1 ನ್ನು ಯಾರು ಬರೆದರು ಎಂದರೆ ನನ್ನ ಹೆಂಡತಿ ಬರೆದರು. ಚಾಸಾ 2 ರಿಂದ 4 ರವರು ನಿಮ್ಮ ಸ್ನೇಹಿತರು ಎಂದರೆ ಹೌದು. ಚಾಸಾ 2 ರಿಂದ 4 ರವರಿಗೆ ಪ್ರಕರಣದ ಬಗ್ಗೆ ನೀವು ಹೇಳಿರುತ್ತೀರಿ ಎಂದರೆ ಅವರು ಅಲ್ಲಿಯೇ ಇದ್ದರು. ಅಲ್ಲಿ ಗಣೇಶ್, ಯತೀಶ್ ವಿಷ್ಣು ಎಲ್ಲರೂ ಇದ್ದರು. ಕರಾವಳಿ ಕಾವಲು ಪಡೆಯವರು ನಿಮ್ಮ ಮೇಲೆ ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ಹೌದು. ನೀವು ದಂಡವನ್ನು ಕಟ್ಟಿ ಮುಗಿಸಿಕೊಂಡಿರುತ್ತೀರಾ ಎಂದರೆ ಹೌದು. ನಿಮ್ಮ ವಿರುದ್ಧ ಕಾವಲು ಪಡೆಯವರು ಯಾವ ಕಾರಣಕ್ಕಾಗಿ ಕೇಸು ದಾಖಲಿಸಿದ್ದರು ಎಂದರೆ ಗಾಳಿ ಮರದ ರೆಂಬೆಗಳನ್ನು ಕಡಿದ ಕಾರಣ ಪ್ರಕರಣ ದಾಖಲಿದ್ದರು. ಗಾಳಿ ಮರದ ರೆಂಬೆಗಳನ್ನು ಕಡಿಯುವುದು ಕಾನೂನು ವಿರುದ್ಧ ಎಂದರೆ ಸರಿ. 2 ನೇ ಆರೋಪಿಯವರು ಕರಾವಳಿ ಕಾವಲು ಪಡೆಯಲ್ಲಿ ಮಾಹಿತಿ ನೀಡುವ ಕೆಲಸವನ್ನು ಮಾಡುವ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. 2 ನೇ

ಆರೋಪಿಯವರು ಮಾಹಿತಿಯನ್ನು ನೀಡಿ ನಿಮ್ಮ ವಿರುದ್ಧ ಪ್ರಕರಣ ದಾಖಲು ಆಗಿದ್ದ ಕಾರಣ ನಿಮಗೆ ಅವರ ಮೇಲೆ ದ್ವೇಷ ಇತ್ತು ಎಂದರೆ ಸರಿಯಲ್ಲ. 2 ನೇ ಆರೋಪಿಯವರಿಗೆ ನಿಮ್ಮನ್ನು ಹೇಗೆ ಕೆಲಸದಿಂದ ತೆಗೆಸಬೇಕು ಒಂದು ನನಗೆ ತಿಳಿದಿದೆ ಎಂದು ಬೆದರಿಕೆ ಒಡ್ಡಿರುತ್ತೀರಿ ಎಂದರೆ ಸರಿಯಲ್ಲ. ನೀವು ಹೇಳುವಂತಹ ಯಾವುದೇ ಘಟನೆಯು ಆ ದಿನ ಸಂಭವಿಸಿರುವುದಿಲ್ಲ ಎಂದರೆ ಸರಿಯಲ್ಲ. ಮೂ ಮಾ 1 ರಂತಹ ಕೋಲುಗಳು ಬೀಚಿನಲ್ಲಿ ಸಹಜವಾಗಿ ಸಿಗುತ್ತದೆ ಎಂದರೆ ಹೌದು. ಪಡುಬಿದ್ರಿ ಸರ್ಕಾರಿ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುತ್ತೀರಾ ಎಂದರೆ ಹೌದು. ಎಷ್ಟು ದಿನ ಒಳ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದೀರಿ ಎಂದರೆ ಒಂದು ದಿನ. ಆ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ನೀಡಿರುತ್ತೀರಾ ಎಂದರೆ ಹೌದು. 1 ನೇ ಆರೋಪಿಯವರು ನಿಮಗಿಂತ ವಯಸ್ಸಿನಲ್ಲಿ ಹಿರಿಯವರಾಗಿರುತ್ತಾರೆ ಎಂದರೆ ಹೌದು. 1 ನೇ ಆರೋಪಿಯವರು ದೈಹಿಕವಾಗಿ ಸದೃಡವಾಗಿಲ್ಲ ಎಂದರೆ ಹೌದು.

ಪೊಲೀಸರು ಘಟನಾ ಸ್ಥಳ ಕ್ಕೆ ಯಾವ ದಿನ ಬಂದಿದ್ದರು ಎಂದರೆ ನೆನಪಿಲ್ಲ. ಆ ದಿನ ಸ್ಥಳ ದಲ್ಲಿ ಯಾರೆಲ್ಲಾ ಇದ್ದರು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಹೇಳುತ್ತೇನೆ. ಘಟನಾ ಸ್ಥಳಕ್ಕೆ ಸಾಕ್ಷಿದಾರರನ್ನು ಪೊಲೀಸರು ಜೊತೆಯಲ್ಲೇ ಕರೆ ತಂದಿರುತ್ತಾರೆ ಎಂದರೆ ಸರಿಯಲ್ಲ. ಘಟನಾ ಸ್ಥಳದ ಆಸುಪಾಸಿನಲ್ಲಿ ಎಷ್ಟು ಮನೆಗಳು ಇದೆ ಎಂದರೆ ಸುಮಾರು 15 ರಿಂದ 20 ಮನೆಗಳು ಇದೆ. ಘಟನೆಯಾದ ಸಮಯದಲ್ಲಿ ತುಂಬಾ ಜನರು ಅಲ್ಲಿ ಸೇರಿದ್ದರು ಎಂದರೆ ಹೌದು.

ನಿಪಿ 2 ಮತ್ತು 3 ನ್ನು ಯಾವಾಗ ಮತ್ತು ಎಲ್ಲಿ ತೆಗೆದಿದ್ದಾರೆ ಎಂದು ನಿಮಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ 2 ಮತ್ತು 3 ನ್ನು ಯಾವ ದಿನ ತೆಗೆದಿರುತ್ತಾರೆ ಎಂದರೆ ದಿನಾಂಕ ನೆನಪಿಲ್ಲ ಘಟನೆಯಾದ 2 ದಿನದ ನಂತರ ತೆಗೆಯಲಾಯಿತು. ನಿಮಗೆ ಗಾಯಗಳಿಂದ ರಕ್ತ ಬಂದಿತ್ತೇ ಮತ್ತು ಬಟ್ಟೆಯ ಮೇಲೆ ಬಿದ್ದಿತ್ತೇ ಎಂದರೆ ಹೌದು. ಈ ಎಲ್ಲಾ ವಿಚಾರಗಳನ್ನು ನೀವು ಪೊಲೀಸರಿಗೆ ತಿಳಿಸಿರುತ್ತೀರಾ ಎಂದರೆ ಹೌದು. ಮೂ ಮಾ 1 ನ್ನು ನೀವೇ ಠಾಣೆಗೆ ತಂದು ಕೊಟ್ಟಿರುವುದು ಎಂದರೆ ಸರಿಯಲ್ಲ. ಪೊಲೀಸರು ಘಟನಾ ಸಮಯಕ್ಕೆ ಎಷ್ಟು ಸಮಯಕ್ಕೆ ಬಂದರು ಎಂದರೆ 12.00 ಗಂಟೆ ಸಮಯಕ್ಕೆ ಬಂದರು. ನಿಪಿ 4 ಕ್ಕೆ ಯಾರೆಲ್ಲಾ ಸಹಿ ಮಾಡಿರುತ್ತೀರಿ

ಎಂದರೆ ದಿನೇಶ್, ಯತೀಶ್ , ಗುಣಪಾಲ, ಮತ್ತು ಗಣೇಶ್ ರವರು ಸಹಿ ಮಾಡಿರುತ್ತಾರೆ. ನೀವು ಹೇಳುವಂತಹ ಯಾವುದೇ ಘಟನೆಯು ನಡೆಯದೇ ಆರೋಪಿತರ ವಿರುದ್ದ ಇರುವ ದ್ವೇಷದಿಂದ ಸುಳ್ಳು ದೂರನ್ನು ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. 2 ನೇ ಆರೋಪಿಯವರು ಕರಾವಳಿ ಕಾವಲು ಪಡೆಯಲ್ಲಿ ಕೆಲಸಕ್ಕೆ ಇರುವುದರಿಂದ ಆ ದಿನ ಘಟನೆಯಾಗಿದೆ ಎಂದು ಹೇಳುವ ಸ್ಥಳದಲ್ಲಿ ಇರಲಿಲ್ಲ ಎಂದರೆ ಇದ್ದರು. ಆರೋಪಿತರಿಗೂ ನಿಪಿ 2, 3 ಮತ್ತು ಮೂ ಮಾ 1 ಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ಸಾಕ್ಷ್ಯಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.